ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು

ಇ) ನಿಜ.

ಈ) ತ್ವರಿತಗತಿಯಲ್ಲಿ ಪರಿಶೀಲನೆ ನಡೆಯುತ್ತಿದ್ದು ವ್ಯಂದ ಮತ್ತು ನೇಮಕಾತಿ ನಿಯಮಗಳ ರಚನೆ ಆದ ತಕ್ಷಣ ಬಡ್ತಿ ಅವಕಾಶ ಕಲ್ಪಿಸಲಾಗುವುದು.

ಖಾಸಗಿ ಅನುದಾನಿತ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿನ ಹೆಚ್ಚುವರಿ ವಿಭಾಗ ವಿಷಯಗಳನ್ನು ಅನುದಾನಕ್ಕೆ ಒಳಪಡಿಸದಿರುವ ವಿಚಾರ.

2750 (3474) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಹಾಗೂಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣ ಇಲಾಖೆಯ ಮೈಸೂರುವಿಭಾಗದ ವ್ಯಾಪ್ತಿಯಲ್ಲಿ ಯಾವ ಯಾವ ಪ್ರೌಢ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳ ಹೆಚ್ಚುವರಿ ವಿಷಯಗಳಿಗೆ ನೇಮಕಗೊಂಡ ನೇಮಕಾತಿಯನ್ನು ನುದಾನ ರಹಿತವಾಗಿ ಅನುಮೋದಿಸಲಾಗಿರುತ್ತದೆ (ದಿನಾಂಕ. 31-3-2000 ರಲ್ಲಿದ್ದಂತೆ ಮಾಹಿತಿಗಳನ್ನು ಶಾಲೆಗಳ ಹೆಸರುಸಹಿತ ಜಿಲ್ಲಾವಾರು ವಿವರ ನೀಡುವುದು)

ಆ) ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಇಂಥ ವಿಷಯಗಳಲ್ಲಿನ ನೇಮಕಗಳನ್ನು ಅನುದಾನಕ್ಕೆ ಒಳಪಡಿಸುವಲ್ಲಿ ಸರಕಾರವು 1996ರಲ್ಲಿ ಆದೇಶ ಹೊರಡಿಸಿ ಮಾರ್ಗ ಸೂಚಿಗಳನ್ನು ನೀಡಿರುವುದು ನಿಜವಲ್ಲವೆ; ಹಾಗೂ ಅನುದಾನಕ್ಕೆ ಒಳಪಡಿಸುವ ಅಧಿಕಾರವನ್ನು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಸಹನಿರ್ದೇಶಕರಿಗೆ ನೀಡಿರುವುದು ನಿಜವಲ್ಲವೇ?

ಇ) ಮೇಲೆ ತಿಳಿಸಿದ ಆದೇಶದ ಮಾರ್ಗ ಸೂಚಿಯನ್ವಯ ಯಾವ ಯಾವ ಪ್ರಕರಣಗಳಲ್ಲಿ ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಈವರೆಗೆ ಪ್ರತಿವರ್ಷದ ಆರ್ಥಿಕ ಆಯವ್ಯಯದ ನಿಗದಿ ಪಡಿಸಿದ ಮೊಬಲಗಳನ್ನು ಅನುದಾನರಹಿತವಾಗಿ ಮಂಜೂರಾದ ಹೆಚ್ಚುವರಿ ವಿಭಾಗದ ಹುದ್ದೆಗಳ ನೇಮಕವನ್ನು ಅನುದಾನಕ್ಕೆ ಒಳ ಪಡಿಸಲು ಉಪಯೋಗಿಸಲಾಗಿರುತ್ತದೆ? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1997-98 ಮಂಡ್ಯ ಜಿಲ್ಲೆ:-

1) ಎಸ್.ಸಿ. ಎಂ. ಪ್ರಾಶಾಲೆ, ಸೋಮಹಳ್ಳಿ-2 ಶಿಕ್ಷಕರು

2) ಎಂ. ವಿಶ್ವೇಶ್ವರಯ್ಯ ಪ್ರೌಢ ಶಾಲೆ - 3 ಶಿಕ್ಷಕರು

ಹಾಸನ ಜಿಲ್ಲೆ :-

1) ಬೂದೇಶ್ವರಸ್ವಾಮಿ ಪ್ರೌಢ ಶಾಲೆ ಹಾಸನ-2 ಶಿಕ್ಷಕರು

2) ಚೇತನ ಪ್ರಾ ಶಾಲೆ, ಸಕಲೇಪುರ - 1 ಶಿಕ್ಷಕರು.

ಮೈಸೂರು ಜಿಲ್ಲೆ :-

1) ಅಶೋಕ ಪ್ರೌಢ ಶಾಲೆ - 2 ಶಿಕ್ಷಕರು

2) ಚೆನ್ನಕೇಶವಸ್ವಾಮಿ ಪ್ರೌಢಶಾಲೆ - 3 ಶಿಕ್ಷಕರು

ಕೊಡಗು ಜಿಲ್ಲೆ :-

1) ದೊರವೀರ ರಾಜೇಂದ್ರ ಪ್ರೌಢಶಾಲೆ, ಸೋಮವಾರಪೇಟೆ ತಾಲ್ಲೂಕು- 2 ಶಿಕ್ಷಕರು

2) ಸಂತಜೋಸೆಫ್ ಬಾಲಕಿಯರಪ್ರಾಥಮಿಕ ಶಾಲೆ, ಚಿಕ್ಕಮಗಳೂರು.- 1 ಶಿಕ್ಷಕರು

ಮಂಗಳೂರು ಜಿಲ್ಲೆ :-

1) ಬೆಥನಿ ಪ್ರೌಢಶಾಲೆ - 1 ಶಿಕ್ಷಕರು

2) ಸಂ ಜಾರ್ಜ್ ಪ್ರೌಢಶಾಲೆ, ಪುತ್ತೂರ - 1 ಶಿಕ್ಷಕರು

3) ಶ್ರೀ. ಸಂತ ಆಗ್ನೇಸ್ - 1ಶಿಕ್ಷಕರು

4) ಶ್ರೀ. ರಾಮಚಂದ್ರ ಪರ್ನೆ - 1 ಶಿಕ್ಷಕರು

5) ಕರ್ನಾಟಕ ಪ್ರೌಢಶಾಲೆ ಮಾಜಿ ಬಂಟ್ವಾಳ ತಾಲ್ಲೂಕು - 1 ಶಿಕ್ಷಕರು

1998-99 ವರ್ಷ

ಚಾಮರಾಜನಗರ ಜಿಲ್ಲೆ :-

ಕ್ರೈಸ್ತ ರಾಜ ಪ್ರೌಢಶಾಲೆ, ಚಾಮರಾಜನಗರ-02 ಶಿಕ್ಷಕರು

ಚಿಕ್ಕಮಗಳೂರು ಜಿಲ್ಲೆ :-

1) ಸಂತ ಜೋಸೆಪ್ ಬಾಲಕಿಯರ ಪ್ರೌಢಶಾಲೆ - 1 ಶಿಕ್ಷಕರು

2) ಮೌಂಟನ್ ವ್ಯೂ ಪ್ರೌಢಶಾಲೆ ಚಿಕ್ಕಮಗಳೂರು. - 2 ಶಿಕ್ಷಕರು

ದಕ್ಷಿಣ ಕನ್ನಡ ಜಿಲ್ಲೆ :-

ಸಂತ ಜೆರೂಸಾ ಪ್ರೌಢಶಾಲೆ, ಜಪ್ಪು - 3 ಶಿಕ್ಷಕರು

1999-2000 ವರ್ಷ:-

ನೇಮಕಾತಿ ಅನುಮೋದನೆ ನಿರ್ಬಂಧವಿದ್ದ ಕಾರಣ ಶೇಕಡ 3 ರನ್ವಯ ಅಯವ್ಯಯದಲ್ಲಿ ಅನುದಾನಕ್ಕೆ ಒಳಪಡಿಸಿ ಅನುಮೋದಿಸಲಾಗಿರುವುದಿಲ್ಲ.

ಆ) ವಿಭಾಗೀಯ ಸಹನಿರ್ದೇಶಕರಿಗೆ 28- 10- 1996ರಲ್ಲಿ ಅನುದಾನ ರಹಿತ ವಿಭಾಗಗಳನ್ನು ಅನುದಾನಕ್ಕೆ ಒಳಪಡಿಸಲು ಆದೇಶಿಸಲಾಗಿದೆ.

ಇ) (ಅ) ನಲ್ಲಿ ನಮೂದಿಸಿರುವಂತೆ ಹೆಚ್ಚುವರಿ ವಿಭಾಗಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ.